ಸಾಕ್ಷಿ ಯನ್ನು ದಿಃ13.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ದೂರುದಾರರು ನನಗೆ 2014 ರಿಂದ ಪರಿಚಯ. 2014 ರಿಂದ ನನಗೆ ಹಾಗೂ ದೂರುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ.
2. ದೂರುದಾರರು ನನ್ನ ಪತಿಯ ಮನೆಯ ಜಾಗವನ್ನು ಖರೀದಿ ಮಾಡಿದ್ದರಿಂದ ಅವರು ಪರಿಚಯ ಆಗಿದ್ದಾರೆ.
3. ನಾನು 2019 ರಿಂದ ರಾಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕುಡಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ.
4. ನನ್ನ ತಂದೆ ಹೆಸರು ಜಯರಾಮ. ನನ್ನ ಪತಿಯ ಹೆಸರು ಶ್ರೀನಿವಾಸ ಕೆ.ಸಿ. ಅವರನ್ನು ಮಂಜು ಎಂದು ಸಹ ಕರೆಯುತ್ತಾರೆ ಎಂದರೆ ಸರಿ.
5. ಸದರಿ ಬ್ಯಾಂಕಿನ ವಿಳಾಸಕ್ಕೆ ನಿಮಗೆ ದೂರುದಾರಿಂದ ನೋಟೀಸು ಬಂದಿತ್ತು ಎಂದರೆ ಸರಿಯಲ್ಲ.
6. ದಿಃ 05.11.2024 ರಂದು ದೂರುದಾರರು ಕಳುಹಿಸಿದ ನೋಟೀಸನ್ನು ನೀವು ಅಂಚೆ ಇಲಾಖೆಯವರೊಂದಿಗೆ ಶಾಮೀಲಾಗಿ ವಾಪಸ್ ಕಳುಹಿಸಿದ್ದೀರಾ ಎಂದರೆ ಸರಿಯಲ್ಲ. ನಂತರ ಪುನಃ 11.11.2024 ರಂದು ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ಸೊಸೈಟಿಗೆ ಯಾವುದೇ ನೋಟೀಸು ಬಂದಿಲ್ಲ.
7. ದಿಃ 11.11.2024 ರ ನೋಟೀಸನ್ನು ಸಹ ನೀವು ವಿಳಾಸ ಸರಿ ಇಲ್ಲ ಎಂದು ಬರೆಸಿ ವಾಪಸ್ ಕಳುಹಿಸಿದ್ದೀರಾ ಎಂದರೆ, ನನಗೆ ಯಾವುದೇ ನೋಟೀಸು ಬಂದಿಲ್ಲ.
8. ಸದರಿ ಎರಡೂ ನೋಟೀಸು ಗಳು ಸಾಮಾನ್ಯ ಅಂಚೆ ನೋಟೀಸು ನಿಮಗೆ ಜಾರಿಯಾಗಿವೆ ಎಂದರೆ ಸರಿಯಲ್ಲ. ನೋಟೀಸು ಜಾರಿಯಾಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
9. ದಿಃ26.08.2024 ರಂದು ನಾನು ಕೆಲಸ ಮಾಡುವ ಸೊಸೈಟಿಯಲ್ಲಿ ಕರ್ತವ್ಯಕ್ಕೆ ಹಾಜರಿದ್ದೆ. ಆ ದಿನ ನೀವು ಗೈರು ಹಾಜರಾಗಿದ್ದು, ಆ ದಿನ ನೀವು ದೂರುದಾರರಿಗೆ ನಿಪಿ -1 ರ ಚೆಕ್ ನೀಡಿ 3 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದೀರಾ ಎಂದರೆ ಸರಿಯಲ್ಲ.
10. ಪೂರ್ಣಿಮಾ ಕೆ. ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ.
11. ನಿಪಿ-1 ರ ಖಾತೆದಾರರಿಗೆ ಹಾಗೂ ನಿಮ್ಮ ನಡುವೆ ಯಾವುದಾದರೂ ವ್ಯವಹಾರ ನಡೆದಿದೆಯಾ ಎಂದರೆ, ಇಲ್ಲ.
12. ಬೇರೆಯವರ ಚೆಕ್ಕನ್ನು ನೀವು ಪಡೆದುಕೊಂಡು ದುರುಪಯೋಗಪಡಿಸಿಕೊಳ್ಳುವ ಅಭ್ಯಾಸ ನಿಮಗೆ ಇದೆಯಾ ಎಂದರೆ, ಇಲ್ಲ.

13. ನಿಮ್ಮ ಬ್ಯಾಂಕಿನಲ್ಲಿ ಪೂರ್ಣಿಮಾ ಎಂಬುವವರು ಬೇರೆ ಯಾರಾದರೂ ಇದ್ದಾರಾ ಎಂದರೆ, ಪೂರ್ಣಿಮಾ ಬಿ.ಎಸ್ ಎಂಬುವವರು ಇದ್ದಾರೆ.
14. ನೀವು ಮೂಲತಃ ಆಲನಹಳ್ಳಿ ಗ್ರಾಮದವರು ಎಂದರೆ, ಸರಿಯಲ್ಲ. ನಾನು ಕೊರ್ಲ ಹೊಸಹಳ್ಳಿ ಗ್ರಾಮದವಳು.
15. ಕ್ರಯಪತ್ರವನ್ನು ಶ್ವೇತಾ ಕೋಂ ಸಾಗರ್ ಎಂಬುವವರಿಂದ ದಿಃ 04.05.2024 ರಂದು ನೊಂದಣಿ ಮಾಡಿಸಿಕೊಂಡಿದ್ದೇವೆ. ಸದರಿ ಕ್ರಯಪತ್ರಕ್ಕೆ ರವಿಕುಮಾರ ಹಾಗೂ ಚಂದನ್ ಕುಮಾರ್ ಎಂಬುವವರು ಸಾಕ್ಷಿ ಹಾಕಿದ್ದಾರೆ.
16. ರವಿಕುಮಾರ ರವರನ್ನು ಸಾಕ್ಷಿ ಹಾಕಲು ಯಾರು ಕರೆದಿದ್ದರು ಎಂದರೆ, ಅವರು ಮಧ್ಯಸ್ಥಿಕೆ ಮಾಡಿದ್ದರಿಂದ ಅವರೇ ಹಾಕುತ್ತೇನೆ ಎಂದು ಸಾಕ್ಷಿ ಹಾಕಿದ್ದಾರೆ. ಸದರಿ ಕ್ರಯಪತ್ರ ನಿವೇಶನದ್ದು. ಎಷ್ಟು ಮೊತ್ತಕ್ಕೆ ಕ್ರಯ ಪಡೆದಿದ್ದೀರಿ ಎಂದರೆ ನನಗೆ ನೆನಪಿಲ್ಲ.
17. ಕ್ರಯಪತ್ರದ ಮೊತ್ತವನ್ನು ನಗದು ಹಾಗೂ ಖಾತೆ ಮೂಲಕ ಸಹ ನೀಡಿದ್ದೇನೆ. ಎಷ್ಟೇಷ್ಟು ಮೊತ್ತ ನೀಡಿದ್ದೀರಾ ಎಂದರೆ, ನೆನಪಿಲ್ಲ. ಆದರೆ 2 ಲಕ್ಷ 50 ಸಾವಿರ ಹಣವನ್ನು ರವಿಕುಮಾರ ರವರಿಗೆ ಚೆಕ್ ಮೂಲಕ ಹಾಕುವಂತೆ ಶ್ವೇತಾ ರವರು ಹೇಳಿದ್ದರಿಂದ ಅದೇ ದಿನ ಹಾಕಿದ್ದೇವೆ.
18. ಶ್ವೇತಾ ರವರಿಗೆ ಒಟ್ಟು ಎಷ್ಟು ಹಣ ಕೊಟ್ಟಿದ್ದೀರಾ ಎಂದರೆ ನೆನಪಿಲ್ಲ.
19. 2 ಲಕ್ಷ 50 ಸಾವಿರ ಹಣವನ್ನು ದೂರುದಾರರ ಮುಖಾಂತರ ನೀಡಿದ ಹಣ ಕೊಟ್ಟ ನಂತರ ಶ್ವೇತಾ ರವರಿಗೆ ಕೊಡಬೇಕಾದ ಹಣ ಅಂತಿಮವಾ ಎಂದರೆ, ಹೌದು.
20. ಸದರಿ ದೂರುದಾರರಿಗೆ ನೀಡಿದ ಹಣದ ವ್ಯವಹಾರ ನಿಡಿ-12 ರಲ್ಲಿ ನಮೂದು ಇದೆಯಾ ಎಂದರೆ, ಇದೆ. ಸದರಿ ಹಣ ರವಿಕುಮಾರ ರವರಿಗೆ ಕೊಡಬೇಕಾದ ಹಣವಲ್ಲ ಎಂದರೆ, ನಾನು ರವಿಕುಮಾರ ರವರಿಗೆ ಯಾವುದೇ ಹಣ ಕೊಡಬೇಕಾಗಿಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯನ್ನು ನೀಡಿ ಮುಂದುಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ